ರಾಜ್ಯ ಸರ್ಕಾರದ ಹೆಲಿಕ್ಯಾಪ್ಟರ್‌ನ ವಿವರಗಳು

೨೬ (೧೮) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರಕಾರದವರು ಹೆಲಿಕ್ಯಾಪ್ಟರನ್ನು ಯಾವಾಗ ಕೊಂಡಿದ್ದು ಹಾಗೂ ಕೊಳ್ಳಲು ಇದಕ್ಕೆ ತಗುಲಿದ ವೆಚ್ಚವೆಷ್ಟು ?

ಆ) ಹಿಂದಿನ ಸರ್ಕಾರದಲ್ಲಿದ್ದಾಗ ಹೆಲಿಕಾಪ್ಟರನ್ನು ಪ್ರವಾಸಕ್ಕಾಗಿ ಉಪಯೋಗಿಸಿದ ಹಣ ಎಷ್ಟು, ಹಾಗೂ ಎಷ್ಟು ಬಾರಿ ಉಪಯೋಗಿಸಲಾಯಿತು?

ಇ) ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೆಲಿಕ್ಯಾಪ್ಟರ್‌ನ್ನು ಎಷ್ಟು ಬಾರಿ ಉಪಯೋಗಿಸಲಾಗಿದೆ ಹಾಗೂ ಅದಕ್ಕೆ ತಗಲಿರುವ ಖರ್ಚು ಎಷ್ಟು ?

ಈ) ಈ ಹೆಲಿಕ್ಯಾಪ್ಟರ್ ಅನ್ನು ನಡೆಸಲು ಎಷ್ಟು ಚಾಲಕರಿದ್ದಾರೆ ಹಾಗೂ ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ಮತ್ತು ಈ ಹೆಲಿಕ್ಯಾಪ್ಟರ್‌ಗಾಗಿ ಪ್ರತಿ ತಿಂಗಳು ತಗಲುವ ಖರ್ಚು ಎಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಸಚಿವರು).—

ಅ) ರಾಜ್ಯ ಸರ್ಕಾರ ಹೆಲಿಕ್ಯಾಪ್ಟರನ್ನು ದಿನಾಂಕ: ೩೦ನೇ ಅಕ್ಟೋಬರ್ ೧೯೮೯ರಂದು ಕೊಂಡಿದೆ. ಅದರ ಬೆಲೆ ರೂ. ೮೬,೩೨,೩೦೪,

ಆ) ೧೯ ಬಾರಿ ಉಪಯೋಗಿಸಿದೆ ಮತ್ತು ೭೦ ಘಂಟೆ ೫ ನಿಮಿಷಗಳು ಯಾನ ಮಾಡಿದೆ. ಇದಕ್ಕೆ ಆಗಿರುವ ವೆಚ್ಚ ರೂ. ೬೫,೫೪,೮೯೬.

ಇ) ೩೫ ಬಾರಿ ಉಪಯೋಗಿಸಿದೆ ಮತ್ತು ೧೮೧ ಘಂಟೆ ೫೫ ನಿಮಿಷಗಳು ಯಾನ ಮಾಡಿದೆ. ಇದಕ್ಕೆ ಆಗಿರುವ ವೆಚ್ಚ ೪೫,೦೮,೦೧೫ ರೂ. ಗಳು.

ಈ) ಹೆಲಿಕ್ಯಾಪ್ಟರ್ ನಡೆಸಲು ಇಬ್ಬರು ಚಾಲಕರು (ಪೈಲಟ್ಸ್) ಇದ್ದಾರೆ. ಬೇರೆ ಸಿಬ್ಬಂದಿ ವರ್ಗ ಇರುವುದಿಲ್ಲ. ಪ್ರತಿ ತಿಂಗಳು ಸುಮಾರು ೧,೩೫,೦೦೦ ರೂ. ಖರ್ಚು ಬರುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ಈ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸ ಬೇಕಾದರೆ ಇಂತಿಂಥ ಸಂದರ್ಭಗಳಲ್ಲೇ ಉಪಯೋಗಿಸಬೇಕು ಎನ್ನುವ ಬಗ್ಗೆ ಸರ್ಕಾರ ಏನಾದರೂ ನೀತಿ ನಿಯಮಾವಳಿಯನ್ನು ಇಟ್ಟು ಕೊಂಡಿದೆಯೇ ? ಈ ರೀತಿ ನೀತಿ ನಿಯಮಾವಳಿಯನ್ನು ಇಟ್ಟುಕೊಂಡಿದ್ದರೆ ಅದರಲ್ಲಿ ಇತರೆ ರಾಜಕೀಯ ಪಕ್ಷಗಳ ನಾಯಕರು ಉಪಯೋಗಿಸುವುದಕ್ಕೆಂದು ಯಾವಾಗಲಾದರೂ ಹೆಲಿಕ್ಯಾಪ್ಟರ್‌ನ್ನು ಕೇಳಿದ್ದರೆ ನೀವು ಕೊಟ್ಟಿದೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಇದನ್ನು ಬೇರೆ ರಾಜಕೀಯ ಪಕ್ಷಗಳೂ ತೆಗೆದುಕೊಂಡಿವೆ. ೧೯೮೯ರಿಂದ ೧೯೮೩ರ ಜನವರಿವರೆಗೆ ೭೦೦ ಗಂಟೆ ೫ ನಿಮಿಷ ಉಪಯೋಗ ಮಾಡಿದೆ. ಈ ಹೆಲಿಕ್ಯಾಪ್ಟರ್ ೬೫,೫೪,೮೯೬ ರೂಪಾಯಿ ಖರ್ಚಾಗಿದೆ. ೧೯೮೩ರ ಜನವರಿಯಿಂದ ಈ ತಹಲ್‌ವರೆಗೆ ೧೮೧ ಗಂಟೆ ೫೫ ನಿಮಿಷಕಾಲ ಈ ಸರ್ಕಾರ ಉಪಯೋಗಿಸಿದೆ. ನಾನು ಈ ಎರಡೂ ಸರ್ಕಾರಗಳು ಉಪಯೋಗಿಸಿರುವುದನ್ನು ಡಿಫರೆನ್ಷಿಯೇಟ್ ಮಾಡಿ ಹೇಳುತ್ತಿದ್ದೇನೆ. ಈ ಹೆಲಿಕ್ಯಾಪ್ಟರ್‌ಗೆ ಈ ಸರ್ಕಾರ ಖರ್ಚು ಮಾಡಿರತಕ್ಕ ಹಣ ೪೫,೦೮,೦೧೫ ರೂಪಾಯಿ ಹೆಲಿಕ್ಯಾಪ್ಟರ್ ನಿಂತಿರಲಿ, ಹಾರಾಡುತ್ತಿರಲಿ ಇದಕೋಸ್ಕರ ಸಿಬ್ಬಂದಿಯ ಸಂಬಳ, ವಿಮೆ, ಮುಂತಾದ್ದಕ್ಕೆ ಹಣ ಕೊಡಲೇ ಬೇಕಾಗುತ್ತದೆ. ಹಿಂದಿನ ಸರ್ಕಾರ ಉಪಯೋಗ ಮಾಡಿದ್ದು ೭೦೦ ಗಂಟೆ ೫ ನಿಮಿಷ. ಅವರು ಸ್ವಲ್ಪ ದುಡ್ಡನ್ನು ಡಿ.ಡಿ. ಮೂಲಕ ಎಕ್ಸಿಕ್ಯೂಟಿವ್ ಇಂಜಿನೀಯರ್, ಡಿವಿಜನ್ ನಂಬರ್ ೧, ಇವರಿಗೆ ಕೊಟ್ಟಿದ್ದಾರೆ. ಇನ್ನೂ ೧೬೫೨ ರೂಪಾಯಿ ಬಾಡಿಗೆ ಕೊಡತಕ್ಕ ಬಗ್ಗೆ ನಾವು ಪತ್ರವನ್ನು ಬರೆದಿದ್ದೇವೆ. ಆದರೆ ಹಣ ಇನ್ನೂ ಬಂದ ಹಾಗಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ರಾಜ್ಯದಲ್ಲಿ ಬರಗಾಲ ಬಂದಾಗ, ಮತ್ತು ಪ್ರವಾಹದ ಹಾವಳಿ ಆದಾಗ ಅದನ್ನು ವೀಕ್ಷಣೆ ಮಾಡುವುದಕ್ಕೆ ಸರ್ಕಾರ ಈ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸಿದೆ. ಇದನ್ನು ವೀಕ್ಷಣೆ ಮಾಡಲು ಹೋದ ಸಂದರ್ಭಗಳಲ್ಲಿ ವಿರೋಧಪಕ್ಷದ ನಾಯಕರು ಮತ್ತಿತರ ರಾಜಕೀಯ

ನಾಯಕರಿಗೆ ಇದರ ಅರಿವು ಉಂಟಾಗಬೇಕೆಂದು ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೀರಾ ? ಈ ಹೆಲಿಕ್ಯಾಪ್ಟರ್‌ನ್ನು ಉಪಯೋಗಿಸುವಾಗ ಇದು ಏನಾದರೂ ಕೆಟ್ಟು ನಿಂತಿತ್ತೇ ? ಹಾಗೆ ಕೆಟ್ಟು ನಿಂತಿದ್ದರೆ ಎಲ್ಲಿ ? ಮತ್ತು ಯಾವಾಗ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ನಾನೂ ಕೂಡ ೨-೩ ಸಾರಿ ವೀಕ್ಷಣೆ ಮಾಡುವುದಕ್ಕೆ ಹೋಗಿದ್ದೇವೆ. ಸರ್ವೇ ಸಾಮಾನ್ಯವಾಗಿ ಕೆಲವು ಸಲಹತ್ತುಗಳನ್ನು ಪ್ರಧಾನ ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ ಕೊಡತಕ್ಕ ದೃಷ್ಟಿಯಿಂದ ನಿಯಮಗಳನ್ನು ಮಾಡಿರುತ್ತೇವೆ. ಅಲ್ಲಿ ಪ್ರಧಾನ ಮಂತ್ರಿಗಳಿಗೆ ವಿಮಾನವನ್ನು ಕೊಟ್ಟಿರಬಹುದು; ಇಲ್ಲಿ ಮುಖ್ಯ ಮಂತ್ರಿಗಳಿಗೆ ಮಿತವ್ಯಯ ದೃಷ್ಟಿಯಿಂದ ಹೆಲಿಕ್ಯಾಪ್ಟರ್‌ನ್ನು ಕೊಟ್ಟಿರಬಹುದು. ಆದರೆ ವಿರೋಧಪಕ್ಷದವರಿಗೆ ಅಥವಾ ವಿರೋಧ ಪಕ್ಷದ ನಾಯಕರಿಗೆ ಕೊಡಬೇಕೆಂದು ಇದನ್ನು ಮಾಡಿಲ್ಲ. ಅಲ್ಲಿಯೂ ಈ ಪದ್ಧತಿ ಇಲ್ಲ. ಇಲ್ಲಿಯೂ ಈ ಪದ್ಧತಿ ಇಲ್ಲ ಇದರ ಜೊತೆಗೆ ಬೇರೆ ರಾಜಕೀಯ ಪಕ್ಷಗಳ ಮುಖಂಡರು ಅಥವಾ ರಾಜಕೀಯ ಪಕ್ಷಗಳು ಬಾಡಿಗೆಗೆ ಕೇಳಿದರೆ ಕೊಡಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಕಾಲವನ್ನು ಮಿತವ್ಯಯ ಮಾಡಬೇಕೆಂದು ತಾವು ಹೆಲಿಕ್ಯಾಪ್ಟರನ್ನು ಉಪಯೋಗಿಸುತ್ತಿದ್ದೀರಿ. ಇದೇರೀತಿ ಎಲ್ಲಮಂತ್ರಿಗಳಿಗೂ ಒಂದೊಂದು ಹೆಲಿಕ್ಯಾಪ್ಟರನ ಕಾಲವನ್ನು ಕೊಟ್ಟು ಇನ್ನೂ ಮಿತವ್ಯಯ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಎಲ್ಲ ಮಂತ್ರಿಗಳಿಗೂ ಒಂದೊಂದು ಹೆಲಿಕ್ಯಾಪ್ಟರ್ ಕೊಡುವುದಕ್ಕೆ ನಮಗೆ ರಿಸೊರ್ಸಸ್ ಇಲ್ಲ. ಮುಖ್ಯ ಮಂತ್ರಿಗಳು ಉಪಯೋಗ ಮಾಡುವುದಕ್ಕೂ, ಬೇರೆ ಮಂತ್ರಿಗಳು ಉಪಯೋಗ ಮಾಡುವುದಕ್ಕೂ ವ್ಯತ್ಯಾಸ ಇದೆ. ಸರ್ಕಾರದ ದಕ್ಷತೆ, ಮತ್ತು ಚಾಲನೆ ಹೆಚ್ಚಾಗಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಹೆಲಿಕ್ಯಾಪ್ಟರನ್ನು ಹೆಚ್ಚಾಗಿ ಉಪಯೋಗ ಮಾಡಬೇಕು.

ರೋಗದಿಂದ ತೆಂಗಿನ ಮರಗಳಿಗೆ ಹಾನಿ

೨೭(೧೮೫) ಶ್ರೀ ಬಿ. ಎಮ್. ಇದಿನಬ್ಬ (ಉಳ್ಳಾಲ).—ಕೃಷಿ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡದ ಕರಾವಳಿಯುದ್ದಕ್ಕೂ ೧೯೮೬ರಲ್ಲಿ ತೆಂಗಿನ ಮರಗಳಿಗೆ ಕಪ್ಪು ತಲೆ ಹುಳುಗಳಿಂದ ಅಪಾರಹಾನಿ ಯಾದುದು ನಿಜವಲ್ಲವೇ?

ಆ) ಈ ರೋಗದಿಂದ ಹಾನಿಗೊಳಗಾದ ತೆಂಗಿನ ಮರಗಳೆಷ್ಟು ಹಾಗೂ ಇದರ ನಿವಾರಣೆ ಸಾಧ್ಯವಿಲ್ಲವೇ?

ಇ) ಈ ರೋಗವನ್ನು ತಡೆಗಟ್ಟಲು ಸರ್ಕಾರದವರೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ; ಹಾಗಿದ್ದಲ್ಲಿ ಅದು ಏನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಸ್ವಲ್ಪ ಮಟ್ಟಿಗೆ ಕಪ್ಪು ತಲೆ ಹುಳುಗಳ ಬಾಧೆಯಿಂದ ತೆಂಗಿನ ಮರಗಳಿಗೆ ಹಾನಿಯಾಗಿರುವುದು ನಿಜ.

ಆ) ಇಲಾಖೆಯು ಕೈಗೊಂಡ ಸಮೀಕ್ಷೆ ಪ್ರಕಾರ ಜನವರಿ ೧೯೮೬ ರಿಂದ ಈಚೆಗೆ ೭೮,೮೫೦ ಮರಗಳಲ್ಲಿ ಈ ಕೀಟ ಭಾದೆ ಕಾಣಿಸಿಕೊಂಡಿದೆ. ಇದರ ನಿವಾರಣೆ ಸಾಧ್ಯ.

ಇ) ಈ ಕಪ್ಪು ತಲೆ ಹುಳುಗಳ ನಿಯಂತ್ರಣವನ್ನು ಮಾಡಲು ಸರ್ಕಾರ ೧೯೮೧-೮೨ನೇ ಇಸವಿಯಲ್ಲಿ ಸಮಗ್ರ ಹತೋಟಿ ಯೋಜನೆಯೊಂದನ್ನು ಮಂಜೂರು ಮಾಡಿದ್ದು ಈ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯನಿರ್ವಹಣೆ ಮಾಡುತ್ತಿದೆ. ಇದರ ಅಂಗವಾಗಿ ಈ ಕೆಳಕಂಡ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.—

(೧) ಕೀಟ ಬಾದೆಗೆ ತುತ್ತಾದ ಸಣ್ಣ ಗಿಡಗಳ ಗರಿಗಳನ್ನು ಕತ್ತರಿಸಿ ಸುಡುವುದು.

(೨) ಕೀಟ ಬಾದೆಗೆ ತುತ್ತಾದ ಸಣ್ಣ ಮರಗಳಿಗೆ ಕೀಟ ನಾಶಕವನ್ನು ಸಿಂಪಡಿಸುವುದು.